2000ದ ನೋಟು ಕೊಟ್ಟು ಹ್ವಾದ್ರಲ್ಲ. ಅದ್ಕ ನಾ ಅವರ ಪಿರೆಂಡು ಅಂದ್ನಿ. ಹೌದಿಲ್ರೀ ಮತ್ತs?' ಅದೆಂಥ ನಿರಾಳ ನಗೆಯ ಪರಿಮಳ. ಅವಳ ಮುಖ ಅವಳ ಮನಸ್ಸಿನಷ್ಟೇ ಮುದ್ದು ಮುದ್ದಾಗಿತ್ತು. ದೇಹ ಮಾತ್ರ ಎಂದೋ ಸತ್ತು ಬಾತು ತೂಗುತ್ತಿತ್ತು. ಅವಳ ಮೊಲೆಗಂಟಿನ ಚಂಚಿಯಲ್ಲಿ ಕುಳಿತೆದ್ದು ಬಂದ ನೋಟಿಗೆ ಎಂಥದೋ ಮೆದುತನ ಅಂಟಿದ ಹಾಗೆ.

ಹೀಗೆ, ಬಾಗಿಲಿಗೆ ಬಂದವಳು, ಮುಂದೆ ಅವಳೇನೇ ತರಲಿ ಇಂದಿರೆಯ ಮನೆಬಾಗಿಲು ತೆರೆದಿತ್ತು ಎಂದರೆ, ಗಂಡನ ಪಿರೆಂಡನ್ನು ಬರಮಾಡಿಕೊಳ್ಳುವುದು ಅವಳ ಅನಿವಾರ್ಯತೆಯಾಗಿಬಿಟ್ಟಿತ್ತು. ನಿಂಬೆಹಣ್ಣು, ಮಾವಿನಹಣ್ಣು, ಅಲ್ಯುಮಿನಿಯಂ ಪಾತ್ರೆ ಪಗಡಿ. 'ನೋಡಬೆ, ನಂಗೆ ಬ್ಯಾಡ ನೀ ಕುಂದ್ರು. ತಕಾ ಚಾ ಕುಡಿ' ಇಂತಹ ಜುಜುಬಿ ಸಂಧಾನಗಳಿಗೆ ಜಪ್ಪಯ್ಯ ಅಂದವಳಲ್ಲ. 'ಇಲ್ನೋಡ್ರಿ, ಗಂಡಮಗನ ತಾಯದಿರಿಯವ್ವ, ನಾಳಿ ಸೊಸಿ ಬಂದು ಅದಿಲ್ಲ ಇದಿಲ್ಲ ಅನ್ನಬಾರದು. ಈ ಪರಾತ ತಗೋ. ಒಳಗಿಡು. ರೊಕ್ಕಾ ಎಂದರ ಕೇಳೀನೇನು ನಾನು?' 'ನಿಂಬಿಹಣ್ಣು ಆರೋಗ್ಯಕ್ಕ ಒಳ್ಳೇದು. ಕುದಿಸಿ ಬಸ್ದು ಸೀ ಉಪ್ಪಿನಕಾಯಿ ಮಾಡು. ಆಫೀಸಿಗೆ ಹೋಗೂ ಮುಂದ ಡಬ್ಬ್ಯಾಗ ಒಂದೆರಡ ಹೋಳ ಹಾಕ್ಕೊ...' ಇಷ್ಟಂತೂ ಖಾತ್ರಿಯಾಗಿಹೋಗಿತ್ತು ಇಂದಿರೆಗೆ. ಈ ಘಾಟಿ ಹೆಣ್ಣು ಎರಡ್‌ಸಾವಿರದ ನೋಟು ಹೊಳ್ಳಿಸಿ ಇಪ್ಪತ್ತ ಸಾವಿರದ ಯಾಪಾರ ಫಿಕ್ಸ್ ಮಾಡಿಕೊಂಡಳು. ಆದರೆ ಅವಳ ಮಾತು ಮನಸ್ಸಿಗೆ ಹಚ್ಚೆ ಹೊಯ್ದಂತೆ ಯಾವುದೋ ಜನ್ಮಾಂತರದ ಋಣದಲ್ಲಿ ಅದ್ದಿ ತೆಗೆದಂತೆ.

ಈ ಮಧ್ಯಂತರದಲ್ಲಿಯೇ, ಅವಳ ಬದುಕಿನ ಕಥೆಯ ರೀಲು ತುಂಡು ತುಂಡಾಗಿ ಬಿಚ್ಚಿಕೊಳ್ಳುತ್ತಿತ್ತು. 'ಇಡೀ ದಿನ ಒಜ್ಜೆ ಹೊತ್ತು ಊರೂರು ತಿರಗ್ತಿ. ನಿಂಗೆ ಮೈ ಭಾರ ಅನಸಾಂಗಿಲ್ಲ? ಇಷ್ಟ ದಪ್ಪ ಯಾಕದಿ ನೀ, ಯಾವಾಗಿಂದ್ಲೂ ಹಿಂಗs ಅದದೀ?' ಒಂದೆರಡೇ ಆಪ್ತ ಪ್ರಶ್ನೆಯನ್ನವಳು ಹಾಗೆ ತಬ್ಬಿಕೊಂಡಿದ್ದಳೆಂದರೆ... ಅದಕ್ಕಾಗಿಯೆ ಕಾದಿದ್ದವಳಂತೆ. ಅವರಪ್ಪ ಅವ್ವ ನಾಕು ಹೆಣ್ಮಕ್ಕಳು ಅಂತ ಹಿರಿಯಾಕಿ ಈ ಮುದುಕಮ್ಮನನ್ನು ತವರ ಸೋದರ ಸಂಬಂಧಕ್ಕ ಮದ್ವಿ ಮಾಡಿದ್ರಂತ. ಆಕಿ ಸಣ್ಣಾಕಿರುವಾಂಗಿದ್ಲೂ ಹಿಂಗs ಗಡತರ ಇದ್ಲಂತ. ಆದ್ರ ಮದ್ವಿಯಾದ ಮ್ಯಾಗ ಅದೇನಾಯ್ತೋ ತಿಳೀಲಾರದ ಹಾಗ ಉಬ್ಬಿಕೊಂತಾನ ಹೋದ್ಲಂತ. ಒಂದ ಬಾರಿ ಹೊಟ್ಟಿ ಹೋದದ್ದs ನೆಪ. ಅಮ್ಯಾಗಿಂದ ಹಿಂಗss. ಹೊಟ್ಟೀನೂ ನಿಂದರಲಿಲ್ಲ. ಮೈ ಭಾರಾನೂ ಇಳೀಲಿಲ್ಲ. ಹಾಂಗs ದುಡಕ್ಕೊಂತ ತೇಕಕೊಂತ, ಗಂಡನಿಂದ ಸ್ವಾಟಿ ತಿವಿಸಿಕೊಂತ ದಿನಕಳದವು. ಗಂಡ, ಸಿಡಿಮಿಡಿ ಮಾಡಾಕತ್ತಿದ್ದ. ತನ್ನದೇನು ಭೂಮಿಮ್ಯಾಗಿನ ರಾಜವಂಸ ಅನ್ನೋವರ ಹಾಂಗ ಮನತನ ಪರದೇಶಿ ಆತು ಅಂತ ಒದ್ದಾಡುವವರ ಹಾಂಗ ಮಾಡಾಕತ್ತಿsದ. ಕುಡಿಯೂದ್ಕ ಇದೇ ನೆಪಾ ಆತು. ನೋಡಿ ನೋಡಿ ಸಾಕಾತು. ಕಡೀಗ, ನಾನೇ ನಿಂತು ನನ್ನ ಕಿರಿತಂಗೀನ ನನ್ನ ಗಂಡಗ ತಂದ್ಕೊಂಡೆ. ಅತ್ತಾ ಕಡೆ ಅಪ್ಪ ತೀರ್ಕಂಡಿದ್ದ. ಅವ್ವ ಮೆತ್ತಾಗಾಗಿದ್ಲು. ತಂಗಿ ಮೈನೆರದಿದ್ಲು. ಗಂಡಾಹೆಣ್ತಿ ಸುಖವಾಗದಾರ. ನಾನೇ ನಿಂತು ಲಗ್ನಾ ಮಾಡೀನಿ ಅವ್ವಾ.' ತನ್ನ ಬಾಳ ಕಥೆ ಹಾಳ್ತಾ ಹೇಳ್ತಾ ಮುದುಕವ್ವ ನಿಲ್ಲಿಸಿದ್ಲೋ ಏನೋ ಇಂದಿರೆ ತಣ್ಣಗೆ ತಡವರಿಸಿ ಕೇಳಿದ್ದಳು. 'ನೀ ಹ್ಯಾಂಗದೀ, ಆರಾಮದೀ?' ಏನೋ ಕೇಳಲು ಹೋಗಿ ಏನೋ ಆದ ಎಲ್ಲಕ್ಕೂ ಮಾತು ಕೊಟ್ಟೇನೆಂಬ ಕಸುವೇ ಸೋತ ಹಾಗೆ. ಆದರೆ ಆದರೆ ಇವಳು ಕೇಳಿದ್ದೇನೆಂದು ಅವಳ ಜೀವ ಅರಿತ ಅನೂಹ್ಯ ಗಳಿಗೆಯೊಂದು ಹೊರಳಾಡಿತ್ತು. 'ಅದೀನವ್ವ ಹಂಗ.. ಆದ್ರ ನಂಗs ಈಗ ಅದs ಮನ್ಯಾಗ ಅವರ ಸಂಗಾಟ ಇರೂದು ಕುತ್ತಿಗಿಗಿ ಬಿರಿ ಬಂದ ಹಾಂಗ ಆಗ್ಯಾದ. ಆಕೀಗ ಎರಡು ಗಂಡ ಮಕ್ಳ ಆಗ್ಯಾರ. ಸಾಲೀಗ ಹೊಂಟಾರ. ಬಾಣಂತನಾ ಮಾಡೀನಿ. ನಾನs ಮಕ್ಕಳ್ನ ಜೋಪಾನ ಮಾಡೀನಿ. ಆದ್ರ ಈಗ ನಾ ಅವರ್ಗ ಬ್ಯಾಡಾಗೀನಬೇ. ದಿನಾ ದುಡ್ದು ಹೋದ್ರ ನಂಗೂ ನಿರಾಳ. ಅವ್ರಗೂ ನಿರಾಳ. ಹೋದಾಕಿ ಜಳಕಾ ಮಾಡಿ ಉಂಡು ಮಕ್ಕೊಂಬಿಡ್ತೀನಿ. ನಿದ್ದೆ ಬರಾಂಗಿಲ್ಲಾದ್ರ ತಲಿಯಾಗ ಕೊಳ್ಳಿದೆವ್ವ ಕುಣಿಯಾಕ ಸುರುವಾದ್ವು ಅಂದ್ರ ಒಂದ್ ಪಾಕಿಟ್ ಹಾಕ್ಕೊಂಡ ಮಕ್ಕೊಂಬಿಡ್ತೀನಿ. ಮುಂಜಾನಿಕ್ಕ ಮೈ ಹಳವಾರಾಕ್ಕೇತಿ.'

ಮೈಭಾರದ ಕಥೆಯ ಪದರೊಳಗೆ ಮನಸ್ಸು ಭಾರದ ಹುದಲುಗಟ್ಟಿತ್ತು. ಈ ಮುದುಕಮ್ಮನ ಕಥಿ ತಂದು ತನ್ನ ಬಾಗಿಲಿಗೆ ನಿಲ್ಲಿಸಿದ ಗಂಡನನ್ನ ಹರಿದು ತಿನ್ನುವಾ ಅಂತಾಗಿತ್ತು ಇಂದಿರೆಗೆ. ಹಿಂಗ ಮೈ ಬರಾಕ ಆಕೀsಗ ಥೈರಾಯ್ಡ್ ಆಗಿರಬಹುದು – ಅಂತ ತರ್ಕಿಸಿ, ಹಿಂಗಂಗ ಸಿವಿಲ್ ದವಾಖಾನಿಗಾದ್ರೂ ಹೋಗಿ ತೋರಿಸ್ಕ ಅಂತ ಸಲಹೆ ಕೊಟ್ಟಳು. ತಾನು ಉಟ್ಟು ಹಳೆಯದಾಗಿದ್ದ ಎರಡು ಒಳ್ಳೇ ಸೀರಿ ಕೊಟ್ಟಳು. ಬರ್ತಿರು ಅಂತ ಸಮಾಧಾನ ಆಡಿ ಕಳಿಸಿದಳು. ಅವಳನ್ನು ಕಳಿಸಿದ ಮೇಲೂ ಮಣ್ಣಿನ ಗಾರೆ, ತಗಡಿನ ಸೀಟು ಹೊದ್ದ ಸಣ್ಣ ಮನೆಯಲ್ಲಿ ಗಂಡ ಸವತಿಯೊಟ್ಟಿಗೆ ಬದುಕುವವಳ ಸ್ಥಿತಿ ನೆನೆದು ಮೈಮೇಲೆ ಮುಳ್ಳು ಬಂದಂಗಾಗಿತ್ತು. ಈ ಸಲ ಬಂದಾಗ ಒಂದಿಷ್ಟು ರೊಕ್ಕ ಕೊಟ್ಟಾದರೂ ಆಸ್ಪತ್ರೆಗೆ ಹೋಗಲು ಹೇಳಬೇಕು. ಆಕಿ ತೆಳ್ಳಗಾದ್ರ ಖರೇನ ಚೆಂದ ಕಾಣ್ತಾಳ. ಆ ಕಟೆದು ಜೋಡಿಸಿಟ್ಟಂತಹ ಹಲ್ಲು, ಆ ಗಿಳಿ ಕೊಕ್ಕಿನ ಮೂಗು, ಸದಾ ಎಣ್ಣೆಬಟ್ಟಲಲ್ಲಿ ಹೊರಳಿಸಿಟ್ಟ ಸಾಲಿಗ್ರಾಮದಂತಹ ಕಣ್ಣ ಹೊಳಪು... ಕಮ್ಮಿಯೇ? ಈಗೊಂದ್ಯೆದಾರು ತಿಂಗಳ ಹಿಂದೆ ಅಲ್ಯುಮಿನಿಯಂ ಭಾಂಡೆ ಹೊತಕೊಂಡು ಬಂದಿದ್ದಳು. ಈಗನ್ನಿಸ್ತಿದೆ ಇಂದಿರೆಗೆ.

ಮುದುಕಮ್ಮನಿಗೆ ಭಾಂಡೆ ನೆಪವಾಗಿತ್ತು. ರವಿವಾರದ ಮಧ್ಯಾಹ್ನ ಸೀದಾ ಗೇಟು ಸರಿಸಿ ಒಳಬಂದು ಭಾಂಡೆ ಇಳುವಿ ನೀರು ಕೇಳಿದಳು. ನೀರು ಗುಟುಕರಿಸಿ ಸಣ್ಣ ದನೀಲಿ ಸುರು ಮಾಡಿದ್ದಳು. ಅವಳಿಗೆ ಮೈಮ್ಯಾಲ ಹೋಗಾಕತ್ತಿ ತಿಂಗಳಾಗಿತ್ತಂತೆ. ತೋರಿಸಿದರೆ ಸ್ಕ್ಯಾನಿಂಗ್ ಪ್ಯಾನಿಂಗ ಅಂತ ಬಿಲ್ ಹೇಳ್ತಾರಂತೆ. ಹತ್ತು ಸಾವಿರ ಬೇಕಂತೆ. ದುಡಿದದ್ದೆಲ್ಲ ಗಂಡನ ಉಡಿಗೆ ಹಾಕಿದ್ದಾಳೆ. ಈಗ ಗಂಡ ಕೈಯೆತ್ತಿದ್ದಾನೆ. ಮುದುಕಮ್ಮ ಸೆರಗು ಕಣ್ಣಿಗೆ ಹಚ್ಚಿದ್ದಳು. ಬರೀ ನಲವತ್ತರ ಆಸುಪಾಸಿನ ಹೆಣ್ಣು. 'ಕರಕೊಳ್ಳೋದಾದ್ರ ಸನ್ಮಂತದಿಂದ ಕರ್ಕೋಬೇಕವ. ಹಿಂಗ ಆಟ ಆಡಸಾಕ ನಾ ಯೇನ ಧೋಕಾ ಮಾಡೀನವಗ?' – ಎಂದು ಕಣ್ಣಿಗೆ ಕಾಣದ ಪರಮಾತ್ಮನನ್ನು ಬೈದು. ಮನಸ್ಸು ಹಿಡಿಮಾಡಿಕೊಂಡಳು. 'ನಾನೂ ಏನರ ಕೊಟ್ಟೇನೇಳು. ಯಾಕ ಕಣ್ಣೀರಾಕ್ತಿ?' ಎಂದಿದ್ದೆ. 'ಬಿಡ್ತು ಅನ್ನವ್ವ. ನಂದು ಮುಗೀಲಾರದ ಜಾಪತ್ರಿ ಅನಸಲಾಕ ಹತ್ತೇತಿ. ಬರೀ ನೋಡಾಕ, ಅದೂ ಸಿಲ್‌ದಾಗ ಹತ್ಪತ್ರು ಸಾವರ ಅಂದರ? ಅವರೇನು, ನನ್ನ ಆಯುಷ್ಯದ ಧೋಕಾ ತುಂಬಿಕೊಡಾವರಿದ್ದಾರೇನು? ಯವ್ವ, ಮಸ್ತ ಚಾ ಮಾಡಿಕೊಡು. ಅದs ನೀ ಯಾಲಕ್ಕಿ ಹಾಕ್ತಿಯಲ್ಲ. ಆ ಮಸಾಲಾ ಚಾಯ್ ಕೊಡು' ಎಂದು ಮಾಡಿಸಿಕೊಂಡು ಕುಡಿದಳು.

ನೋವಿನ ಹಗೇವಿನಿಂದ ಛಕ್ಕನೇ ಎದ್ದು ನಗುವಿನ ಬೆಳಕಾಡಿಸುವ ಹೆಣ್ಣಿನ ತಾಕತ್ತನ್ನು ಅರೆಮಂಜುಗಣ್ಣಿನಲ್ಲಿ ದಿಟ್ಟಿಸಿದ್ದಳು ಇಂದಿರೆ. ತಲೆಯ ಸಿಂಬಿ ಸುತ್ತಿಕೊಳ್ಳುತ್ತ ಹೊರಡುವ ತಯಾರಿ ಮಾಡಿಕೊಳ್ಳುತ್ತಿದ್ದವಳಿಗೆ ಇಂದಿರೆ ಸಾವಿರ ರೂಪಾಯಿ ಕೊಡಲು ಹೋದರೆ, ಬ್ಯಾಡಾ ತಪ್ಪಾಗತದ. ಶಿವ ಮೆಚ್ಚಾಣೆಲ್ಲ ಎಂದು ಎದ್ದಳ. ಅಂದಿನಿಂದ ಸುದ್ದಿಯಿಲ್ಲ. ಇಂದಿರೆಗೆ ಆಗಾಗ ಜೀವ ಗದಬರಿಸಿದಂತೆ ಅವಳ ನೆನಪಾಗುತ್ತದೆ. ಓಣಿಯಲ್ಲಿ ಯಾರೋ ಏನೋ ಮಾರಲು ರಾಗ ಎಳೆದರೆ ಸಾಕು, ದಡಬಡಿಸಿ ಬಾಗಿಲಿಗೆ ಓಡುತ್ತಾಳೆ. ದನಿ ಅದ್ಯಾವುದೋ ತಿರುವಿನಲ್ಲಿದ್ದರೆ 'ಬಂದಳು ಅವಳೇ' ಎಂದು ಕಾಲೊಳಗೆ ನವಿಲು ಗರಿಯಾಡಿಸುತ್ತದೆ. ಕೂಗು ಮನೆ ಮುಂದೆಯೇ ಸಾಗಿ ಹೋದರೆ ಗಾಬರಿಯಿಂದ ಕಣ್ಣು ತುಂಬುತ್ತದೆ. ಈ ಇವಳನ್ನು ತಡೆದು ಕೇಳಲೇ ಎಂದುಕೊಂಡಾಗ ಮತ್ತೊಂದು ಬೆಸುಗೆಗೆ ಮನಸ್ಸು ಸಿದ್ಧವೇ? ಎಂದು ಹತಾಶಳಾಗುತ್ತಾಳೆ.

ಇಂದಿರೆಯ ಕಣ್ಣುಗಳಲ್ಲಿ ಗಲಬರಿಸಿಟ್ಟ ತಬ್ಬಲಿತನವಿದೆ. ಅದು ಯಾವಾಗಲೂ ಇರುವುದೇ ಹೀಗೆ ಎನ್ನುವಂತೆ. ■



